ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ________ ದಿನಾಂಕ : DATE 4/10/2020

# ಅಟಲ್ ಟನಲ್ ಲೋಕಾರ್ಪಣೆ

## 10000 ಅಡಿ ಎತ್ತರದಲ್ಲಿ ನಿರ್ಮಿಸಿದ ಉದ್ದದ ಸುರಂಗಕ್ಕೆ ಪಿಎಂ ಚಾಲನೆ
## ನಾವು 6 ವರ್ಷದಲ್ಲಿ 26 ವರ್ಷದ ಕೆಲಸ ಮಾಡಿದ್ದೇವೆ: ಮೋದಿ
## ಹಿಂದಿನ ಸರ್ಕಾರ ಇದ್ದಿದ್ದರೆ 2040ಕ್ಕೆ ಈ ಕಾಮಗಾರಿ ಮುಗೀತಿತ್ತು



ಮನಾಲಿಯಲ್ಲಿ ಶನಿವಾರ ಅಟಲ್ ಸುರಂಗ ಉದ್ಘಾಟಿಸಿ ನಂತರ ಹೆದ್ದಾರಿಯಲ್ಲಿ ವಾಕಿಂಗ್ ಮಾಡಿದ ಪ್ರಧಾನಿ ನರೇಂದ್ರ ಮೋದಿ.

• **ಪಿಟಿಐ** ರೋಹ್ತಾಂಗ್ (ಹಿಮಾಚಲ ಪ್ರದೇಶ)

ಸಮುದ್ರಮಟ್ಟದಿಂದ 10 ಸಾವಿರ ಅಡಿ ಎತ್ತರದಲ್ಲಿ ನಿರ್ಮಾಣವಾದ 'ವಿಶ್ವದ ಅತಿ ಉದ್ದದ ಹೆದ್ದಾರಿ ಸುರಂಗ' ಎಂಬ ಹಿರಿಮೆಗೆ ಪಾತ್ರವಾಗಿರುವ 9.02 ಕಿ.ಮೀ ಉದ್ದದ ಮನಾಲಿ-ಲೇಹ್ ನಡುವಿನ 'ಅಟಲ್ ಸುರಂಗ ಮಾರ್ಗ'ವನ್ನು ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಕ್ಕೆಸಮರ್ಪಿಸಿದರು. ವ್ಯೂಹಾತ್ಮಕವಾಗಿ ಮಹತ್ವದ್ದಾಗಿರುವ, 3200 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಸುರಂಗದಿಂದ ಮನಾಲಿ ಹಾಗೂ ಲೇಹ್ ನಡುವಿನ ಅಂತರ 46 ಕಿ.ಮೀ.ನಷ್ಟು ಇಳಿಯಲಿದೆ ಹಾಗೂ ಪ್ರಯಾಣದ ಅವಧಿ ಕೂಡ ಸುಮಾರು 5 ತಾಸಿನಷ್ಟು ಕಡಿಮೆಯಾಗಲಿದೆ.

ಬಳಿಕ ಹಿಮಾಚಲಪ್ರದೇಶದ ವಿವಿಧೆಡೆ ಸಮಾರಂಭಗಳಲ್ಲಿ ಮಾತನಾಡಿದ ಮೋದಿ ಅವರು ಕಾಂಗ್ರೆಸ್ ಪಕ್ಷದ ವಿರುದ್ಧ ತೀವ್ರವಾಗಿ ಹರಿಹಾಯ್ದರು. 2005ರ ಅಂದಾಜಿನ ಪ್ರಕಾರ ಒಂಬತ್ತೂವರೆ ಕೋಟಿ ರು.ಗಳಲ್ಲಿ ಸುರಂಗ ಕಾಮಗಾರಿ ಮುಗಿಯಬೇಕಿತ್ತು. ಆದರೆ ಈಗ 3200 ಕೋಟಿ ರು. ಖರ್ಚಾಗಿದೆ. ಇದಕ್ಕೆ ನಿರಂತರ ವಿಳಂಬವೇ ಕಾರಣ. 2013-14ರವರೆಗೆ ಕೇವಲ 1300 ಮೀ. ಕಾಮಗಾರಿ ಮುಗಿದಿತ್ತು. ಇದೇ ವೇಗದಲ್ಲಿ ಕಾಮಗಾರಿ ನಡೆದಿದ್ದರೆ 2040ರಲ್ಲಿ ಸುರಂಗ ನಿರ್ಮಾಣ ಮುಗಿಯುತ್ತಿತ್ತೋ ಏನೋ. 'ಆದರೆ ನನ್ನ ಸರ್ಕಾರ 2014ರಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ಯೋಜನೆಯನ್ನು ಚುರುಕುಗೊಳಿಸಿತು. ವರ್ಷಕ್ಕೆ 300 ಮೀ. ನಡೆಯುತ್ತಿದ್ದ ನಿರ್ಮಾಣವನ್ನು 1400 ಮೀ.ಗೆ ಹೆಚ್ಚಿಸಿತು. ಈ ಕಾರಣ 2020ಕ್ಕೇ ಯೋಜನೆ ಮುಗಿಸಿತು. ಕೇವಲ 6 ವರ್ಷದ ಅವಧಿಯಲ್ಲಿ 26 ವರ್ಷದ ಕೆಲಸವನ್ನು ನಾವು ಮಾಡಿದ್ದೇವೆ' ಎಂದು ಅವರು ಹೇಳಿದರು.

**1** ರಕ್ಷಣಾ ವಿಷಯದಲ್ಲಿ ಕಾಂಗ್ರೆಸ್ ರಾಜಿ. ಹಲವು ಯೋಜನೆಗಳನ್ನೇ ಮರೆತಿತ್ತು ಆ ಪಕ್ಷ: ಮೋದಿ

**2** ವಿಶ್ವದರ್ಜೆಯ ಎಚ್‌ಎಎಲ್ ಕಡೆಗಣಿಸಿದ್ದು ಯಾಕೆ?. ಕೃಷಿ ಮಸೂದೆ ತರುವ ಧೈರ್ಯ ಅವರಿಗಿಲ್ಲ

**3** ಸುರಂಗ 9.5 ಕೋಟಿ ರು.ನಲ್ಲಿ ಮುಗಿಯಬೇಕಿತ್ತು. 3200 ಕೋಟಿ ಖರ್ಚಾಯಿತು: ಪ್ರಧಾನಿ